(ಇಂದು ದಿನಾಂಕಃ 03-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು ಶ್ರೀ ವಿ.ಬಿಸಿ. ಎದುರುದಾರ (R-6)ಪರ ವಕೀಲರಿಂದಃ**

1. ಮೃತ ಉಮೇಶ್ ನನ್ನ ಮಗ. ರಾಮಶೆಟ್ಟಿ ನನ್ನ ಗಂಡ. ನಮಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ, ಇನ್ನೊಬ್ಬ ಮಗನ ಹೆಸರು ರಮೇಶ್ ಇರುತ್ತದೆ. ಸವಿತಾ ನನ್ನ ಸೊಸೆ. ಹೃತ್ವಿಕ್ ನವಜೀತ್ ನನ್ನ ಮೊಮ್ಮಕ್ಕಳು, ಪಾರ್ವತಿ ನನ್ನ ಸೊತೆ, ಅವಳು ನನ್ನ ಮಗನ 2 ನೇ ಹೆಂಡತಿ ಇರುತ್ತಾಳೆ. ಸವಿತಾ ನನ್ನ ಹಿರಿಯ ಸೊಸೆ ಆಗಿದ್ದು, ಅವಳ ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸವಿತಾಳ ಜೊತೆ ಉಮೇಶನ ಮದುವೆ ಆಗಿ 14-15 ವರ್ಷ ಆಗಿತ್ತು. ಆಗ ಸವಿತಾಳ ವಯಸ್ಸು 14-15 ವರ್ಷ ಆಗಿತ್ತು. ಅವರ ಮದುವೆಯಾದ ಒಂದು ವರ್ಷದ ಒಳಗೆ ಹೃತ್ವಿಕ್ ಜನಿಸಿರುತ್ತಾನೆ. ಹೃತ್ವೀಕನಿಗೆ 5-6 ವರ್ಷ ವಯಸ್ಸು ಇರಬಹುದು. ಸವಿತಾಳ ಜೊತೆ ಉಮೇಶನ ಮದುವೆಯಾದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸವಿತಾ ನನ್ನ ಮೊದಲನೇ ಸೊಸೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿಲ್ಲ. ಹೃತ್ವೀಕ್ ಮತ್ತು ನವಜೀತ್ ನನ್ನ ಮೊಮ್ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿಲ್ಲ. ಅಪಘಾತವಾದ ಬಗ್ಗೆ ದೂರನ್ನು 4 ನೇ ಎದುರುದಾರರು ಕೊಟ್ಟಿರುತ್ತಾರೆ, ಪಾರ್ವತಿ ಉಮೇಶನ ಹೆಂಡತಿ ಎಂದು ಪೊಲೀಸ್ ದಾಖಲೆಯಲ್ಲಿ ಇರುತ್ತದೆ ಎಂದರೆ ಸರಿ. ಉಮೇಶ್ ತನ್ನ ಮೊದಲನೇ ಹೆಂಡತಿ ಸವಿತಾಳನ್ನು ವಿಚ್ಛೇದನ ಕೊಟ್ಟಿರುವುದಿಲ್ಲ. ಪಾರ್ವತಿ ಪರಿಹಾರ ಕೋರಿ ಮೆಹೆಬೂಬ್ ನಗರ ನ್ಯಾಯಾಲಯದಲ್ಲಿ ಓ.ಪಿ. ನಂಃ 62/2020 ಅರ್ಜಿ ಅಲ್ಲಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನನ್ನ ಹಾಗೂ ನನ್ನ ಗಂಡನನ್ನು ಸೇರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಸವಿತಾಳನ್ನು ಪಕ್ಷಗಾರಳನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪಾರ್ವತಿ ಜೊತೆ ನನ್ನ ಮಗ ಮದುವೆ ಮಾಡಿಕೊಂಡು ಒಂದೂವರೆ ವರ್ಷ ಆಗಿರುತ್ತದೆ. ಪಾರ್ವತಿಯನ್ನು ನನ್ನ ಮಗ ಮದುವೆ ಮಾಡಿಕೊಂಡಿರುತ್ತಾನೆ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ಮದುವೆಯು ಪಾರ್ವತಿಯ ತಂದೆ ತಾಯಿಯ ಮನೆಯಲ್ಲಿ ಪರಗಿ ಗ್ರಾಮದಲ್ಲಿ ಆಗಿರುತ್ತದೆ. ಆಗ ನನ್ನ ಮಗನ ವಯಸ್ಸು 22 ವರ್ಷ ಆಗಿತ್ತು. ಪಾರ್ವತಿಗೆ 30 ವರ್ಷ ವಯಸ್ಸಾಗಿತ್ತು.

2. ನಾನು ಅಪಘಾತವನ್ನು ನೋಡಿಲ್ಲ. ಅಪಘಾತವಾದ ಬಗ್ಗೆ ನನಗೆ ಪೊಲೀಸರು ತಿಳಿಸಿದರು. ಆ ದಿನ ನನ್ನ ಮಗ ಪರಗಿ ಗ್ರಾಮದಿಂದ ಮುಂದೆ ಹೋಗುತ್ತಿದ್ದನು. ಅವನು

ಮೋಟರ್ ಸೈಕಲ್ ಮೇಲೆ ಹೋಗುತ್ತಿದ್ದನು. ಅವನಿಗೆ ಗಾಡಿ ನಡೆಸಲು ಬರುತ್ತಿತ್ತು. ಅವನ ಚಾಲನಾ ಪರವಾನಿಗೆ ಪ್ರತಿಯನ್ನು ಸಲ್ಲಿಸಿಲ್ಲ. ನನ್ನ ಮಗನಿಗೆ ಚಾಲನೆ ಪರವಾನಿಗೆ ಇರಲಿಲ್ಲ ಮತ್ತು ಅವನಿಗೆ ಗಾಡಿ ನಡೆಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಚಾಲನೆ ಪರವಾನಿಗೆ ಇರಲಿಲ್ಲ ಆದ್ದರಿಂದ ನಾನು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಹೇಗೆ ಆಯಿತು ಎಂದರೆ ಸಾಕ್ಷಿ ಎದುರುಗಡೆಯಿಂದ ಲಾರಿ ಬಂದು ಗುದ್ದಿರುತ್ತದೆ ಎಂದು ಹೇಳುತ್ತಾರೆ. ನಾನು ಅಪಘಾತ ಆದ ನಂತರ ಅಪಘಾತದ ಸ್ಥಳಕ್ಕೆ ಹೋಗಿದ್ದು, ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಟ್ಯಾಂಕರ್ ವಾಹನದ ಚಾಲಕನ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ರಸ್ತೆಯ ಮಧ್ಯದಲ್ಲಿ ಹೋಗುತ್ತಿದ್ದುದರಿಂದ, ಅವನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಮಗ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಬೇರೆ ಕಡೆ ಬಿದ್ದು ಮೃತಪಟಿಟದ್ದು, ಟ್ಯಾಂಕರ್ ವಾಹನದ ವಿರುದ್ಧ ಸುಳ್ಳುದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೂ ಮತ್ತು ಟ್ಯಾಂಕಟರ್ ವಾಹನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಟ್ಯಾಂಕರ್ ವಾಹನ ಚಾಲಕನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಗೊತ್ತಿಲ್ಲ. ದೂರನ್ನು ಪಾರ್ವತಿ ಕೊಟ್ಟಿದ್ದು, ಹಾಗೂ ಸವಿತಾ ಹಾಗೂ ಉಮೇಶ್ ರವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸವಿತಾ ಆ ಮೇಲೆ ಬಂದಿರುತ್ತಾಳೆ ಎಂದು ಹೇಳುತ್ತಾರೆ.

3. ನನ್ನ ಮಗ ಶಾಲೆ ಕಲಿತಿಲ್ಲ. ಅಪಘಾತ ಆದಾಗ ನನ್ನ ಮಗನಿಗೆ 22 ವರ್ಷ ವಯಸ್ಸಾಗಿತ್ತು ಅವನ ವಯಸ್ಸು ಇಷ್ಟು ಇತ್ತು ಎಂದು ತೋರಿಸಲು ಆಧಾರ್ ಕಾರ್ಡ ಸಲ್ಲಿಸಿರುವುದಿಲ್ಲ. ನನ್ನ ಮಗನಿಗೆ 35 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದುಯ, ಪರಿಹಾರ ಪಡೆಯುವ ಉದ್ದೇಶದಿಂದ ಅವನಿಗೆ 22 ವರ್ಷ ವಯಸ್ಸಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಪ್ಲಾಸ್ಟರಿಂಗ್ ಕೆಲಸ ಪೂಣೆಯಲ್ಲಿ ಮಾಡುತ್ತಿದ್ದನು. ನನ್ನ ಮಗ ಯಾರ ಹತ್ತಿರ ಕೆಲಸ ಮಾಡುತ್ತಿದ್ದನು ಎಂದು ಗೊತ್ತಿಲ್ಲ. ನನ್ನ ಮಗ ತಿಂಗಳಿಗೆ 25,000/- ಪಡೆಯುತ್ತಿದ್ದನು. ನನ್ನ ಮಗ ತಿಂಗಳೀಗೆ 25000/- ಗಳಿಸುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸವಿತಾ ಉಮೆಶೀನ ಜೊತೆ ಸುಮಾರು 3 ವರ್ಷ ಇದ್ದಳು. ನನ್ನ ಮೊಮ್ಮಕ್ಕಳು ಶಾಲೆ

ಕಲಿಯುತ್ತಿದ್ದು, ಅವರ ಶಾಲಾ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ, ಸವಿತಾ ಈಗ ಪೂಣೆಯಲ್ಲಿ ಇದ್ದಾಳೆ ಮತ್ತು ಪಾರ್ವತಿ ತನ್ನ ತಂದೆ ತಾಯಿಯವರ ಮನೆಯಲ್ಲಿ ಇದ್ದಾಳೆ.

4. ಉಮೇಶ ತೀರಿಕೊಳ್ಳುವವರೆಗೆ ಸವಿತಾ ತನ್ನ ತಂದೆ ತಾಯಿಯವರ ಮನೆಯಲ್ಲಿ ಇದ್ದಳು. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಕೆಲಸ ಮಾಡುತ್ತಾನೆ ಎಂದರೆ ಸರಿ. ನನ್ನ ಮಗ ರಮೇಶ್ ಕೆಲಸ ಮಾಡುತ್ತಾನೆ ಎಂದರೆ ಸರಿ. ಅರ್ಜಿದಾರರಲೆಲ್ಲರೂ ನನ್ನ ಮಗನ ಆದಾಯ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪು ಇಲ್ಲದಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಲಾರಿ ಚಾಲಕನ ವಿರುದ್ದ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರ ಧನ ಯಾವುದೇ ಆಧಾರವಿಲ್ಲ ಎಂದರೆ ಸರಿಯಲ್ಲ. ಟ್ಯಾಂಕರ್ ವಾಹನಕ್ಕೆ ಪರ್ಮಿಟ್ ಇರಲಿಲ್ಲ, ಆದ್ದರಿಂದ ವಿಮೆ ಕಂಪನಿಯವರು ಪರಿಹಾರ ಧನ ನೀಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸವಿತಾ ಹಾಗೂ ಉಮೇಶನ ಬಾಲ್ಯ ವಿವಾಹ ಆಗಿದ್ದು, ಆ ಮದುವೆ ಕಾನೂನಿನ ಅಡಿಯಲ್ಲಿ ಶೂನ್ಯ ಎಂದರೆ ನನಗೆ ಗೊತ್ತಿಲ್ಲ. ಮೊದಲನೇ ಹೆಂಡತಿ ವಿಚ್ಛೇದನ ನೀಡದೇ ಉಮೇಶ್ 2 ನೇ ಮದುವೆಯಾಗಿದ್ದು, ಅದು ಕಾನೂನಿನ ಅಡಿಯಲ್ಲಿ ಶೂನ್ಯ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.